ಎನ್ನುತ್ತಾ ಅಧಿಕಾರಿಗಳು ಮುನ್ನುಗ್ಗಿದರು. ಹೊರಗಿನ ದ್ವಾರಪಾಲಕರು ಸೈನಿಕರಂತೆ ಧಾವಿಸಿ ಬಂದರು. ಆದರೆ ಕಾಳಿಯ ಮೂರ್ತಿ, ರಾಣಿ ರಾಸಮಣಿ ಮತ್ತು ಶ್ರೀರಾಮ ಕೃಷ್ಣರು ಮಾತ್ರ ಸ್ಥಿರಗಂಭೀರವಾಗಿ ತಮ್ಮ ತಮ್ಮ ಸ್ಥಾನದಲ್ಲಿದ್ದರು. ರಾಮಕೃಷ್ಣರ ಮುಖದಲ್ಲಿ ಮಗು ವಿನಂತಹ ಮುಗುಳ್ನಗೆ ಹೊರಸೂಸುತ್ತಿದ್ದರೆ, ರಾಣಿಯ ಮುಖವು ಪಶ್ಚಾತಾಪದಿಂದ ಬಾಡಿತ್ತು. ಕಾರಣ ಆಕೆ ದೇವಿಯ ಸಮ್ಮುಖದಲ್ಲಿ ಕೋರ್ಟು, ಮೊಕದ್ದಮೆಗಳ ಕುರಿತಾಗಿ ಚಿಂತಿಸುತ್ತಿದ್ದಳು. ಆಕೆಗೀಗ ಶ್ರೀರಾಮಕೃಷ್ಣರು ಒಬ್ಬ ದೈವೀಪುರುಷರೆಂದು ತಿಳಿದುಹೋಯಿತು. ಕೂಡಲೇ ಪರಿಸ್ಥಿತಿಯನ್ನು ಅರಿತ ಆಕೆ ಹೀಗೆ ಆಜ್ಞಾಪಿ ಸಿದಳು: "ಕಿರಿಯ ಭಟ್ಟಾಚಾರ್ಯರಿಗೆ ನೀವು ಏನನ್ನೂ ಮಾಡಬಾರದು. ಅವರದ್ದೇನೂ ದೋಷವಿಲ್ಲ" ಎಂದು. ಇದೊಂದು ಅಸಾಮಾನ್ಯ ಘಟನೆ. ಏಕೆಂದರೆ ಕೆಲಸಗಾರನೊಬ್ಬ ತನ್ನ ಮಾಲೀಕರಿಗೆ ಹೊಡೆದು ಬದುಕುವುದುಂಟೆ? ಶ್ರೀರಾಮಕೃಷ್ಣರಲ್ಲಿ ಆಗ ಗುರುಭಾವ ಜಾಗ್ರತವಾಗಿತ್ತು. ಮಗುವನ್ನು ಶಿಕ್ಷಿಸಿ ಬುದ್ಧಿ ಕಲಿಸುವ ತಂದೆಯಂತೆ ಅವರ ಈ ಭಾವ ಇದ್ದಿತು.

ಶ್ರೀರಾಮಕೃಷ್ಣರ ಶಿಕ್ಷಾಗುರುಗಳಲ್ಲಿ ಭೈರವೀ ಬ್ರಾಹ್ಮಣಿ, ತೋತಾಪುರಿ ಮತ್ತು ಮುಸಲ್ಮಾನನಾದ ಗೋವಿಂದ – ಇವರುಗಳು ಪ್ರಮುಖರು. ಪೂರ್ವಬಂಗಾಳದ ಭೈರವೀ ಬ್ರಾಹ್ಮಣಿಯು ಸಾಧನೆಯಲ್ಲಿ ಅತ್ಯಂತ ಉನ್ನತ ಮಟ್ಟಕ್ಕೆ ಏರಿದ್ದಳು. ಶ್ರೀರಾಮಕೃಷ್ಣರೂ ಸೇರಿದಂತೆ ಮೂವರಿಗೆ ಸಾಧನೆಯಲ್ಲಿ ತಾನು ಸಹಾಯ ಮಾಡಬೇಕಿದ್ದುದನ್ನು ಯೋಗಶಕ್ತಿಯಿಂದ ಅರಿತಿದ್ದಳು. ಚಂದ್ರ ಮತ್ತು ಗಿರಿಜ ಎಂಬ ಸಾಧಕರನ್ನು ಅದಾಗಲೇ ಭೇಟಿಯಾಗಿದ್ದ ಆಕೆ ತನ್ನ ಮೂರನೆಯ ಶಿಷ್ಯನಿಗಾಗಿ ಹುಡುಕುತ್ತಾ, ದೋಣಿಯಲ್ಲಿ ದಕ್ಷಿಣೇಶ್ವರದ ಗಂಗಾತೀರಕ್ಕೆ ಬಂದಿಳಿದಳು. ಶ್ರೀರಾಮಕೃಷ್ಣರು ತಮ್ಮ ಸೋದರಳಿಯ ಹೃದಯನ ಮೂಲಕ ಆಕೆಯನ್ನು ತಮ್ಮಲ್ಲಿಗೆ ಕರೆಸಿಕೊಂಡು, ಭೇಟಿ ಯಾದರು. ಭೈರವೀ ಬ್ರಾಹ್ಮಣಿಗೂ ತಿಳಿಯಿತು, ತಾನು ಹುಡುಕುತ್ತಿದ್ದ ಮೂರನೆಯ ಶಿಷ್ಯ ಇವರೇ ಎಂದು.

ಭೈರವೀ ಬ್ರಾಹ್ಮಣಿಯು ಸುಮಾರು ಹನ್ನೆರಡು ವರ್ಷ ಕಾಲ ದಕ್ಷಿಣೇಶ್ವರದಲ್ಲಿದ್ದಳು. ಆಕೆಯ ಸಹಾಯ ದಿಂದ ಶ್ರೀರಾಮಕೃಷ್ಣರು ತಂತ್ರದ ಅರುವತ್ನಾಲ್ಕು ಪ್ರಧಾನ ಸಾಧನೆಗಳನ್ನು ಮಾಡಲು ಸಾಧ್ಯವಾಯಿತು. ಆಕೆಯು ಭಕ್ತಿಶಾಸ್ತ್ರದಲ್ಲಿಯೂ ಅಪಾರ ವಿದ್ವತ್ತನ್ನು ಪಡೆದಿದ್ದಳು. ಸಖೀ ಭಾವ ಮುಂತಾದ ವೈಷ್ಣವ ಸಾಧನೆಗಳಲ್ಲಿ ಆಕೆ ಶ್ರೀರಾಮಕೃಷ್ಣರಿಗೆ ಸಹಾಯ ಮಾಡಿದಳು. ಶ್ರೀರಾಮ ಕೃಷ್ಣರನ್ನು ಅವತಾರಪುರುಷರೆಂದು ಪ್ರಥಮವಾಗಿ ಘೋಷಿಸಿದ ಮಹನೀಯಳು ಇವಳು.

ತಂತ್ರದಲ್ಲಿ **ಪಶು, ವೀರ** ಮತ್ತು **ದಿವ್ಯ** ಎಂಬ ಮೂರು ಬಗೆಯ ಸಾಧನೆಗಳಿವೆ. ಭೈರವೀ ಬ್ರಾಹ್ಮಣಿಯು ವೀರಭಾವದ ಸಾಧಕಿಯಾಗಿದ್ದಳು. ಅವಳಿನ್ನೂ ದಿವ್ಯ ಭಾವದ ಸಾಧನೆಯ ಮಟ್ಟಕ್ಕೇರಿರಲಿಲ್ಲ. ಶ್ರೀರಾಮಕೃಷ್ಣರ ಗುರುಭಾವದ ಪ್ರೇರಣೆಯಿಂದ ಆಕೆಯ ಮನಸ್ಸು ದಿವ್ಯ ಭಾವದ ಕಡೆಗೆ ಹರಿಯಿತು. ಅವರಿಂದ ವಿದಾಯ ತೆಗೆದುಕೊಂಡು ಅಸಂಗಳಾಗಿ ತೀರ್ಥಪರ್ಯಟನೆ ಮಾಡುತ್ತಾ, ತಪಸ್ಸನ್ನಾಚರಿಸಲು ತೆರಳಿದಳು.

ನಾಗಾ ಸಂಪ್ರದಾಯದವನಾದ ತೋತಾಪುರಿಯು ತೀರ್ಥಯಾತ್ರೆ ಮಾಡುತ್ತಾ, ಎಲ್ಲಿಯೂ ಮೂರು ದಿನ ಕ್ಕಿಂತಲೂ ಹೆಚ್ಚು ದಿನ ನಿಲ್ಲದೆ ಸಂಚರಿಸುತ್ತ, ದಕ್ಷಿಣೇಶ್ವರಕ್ಕೆ ಬಂದಿದ್ದನು. ನಲವತ್ತು ವರ್ಷಗಳ ಕಠಿಣ ಧ್ಯಾನ, ಧಾರಣ, ವೈರಾಗ್ಯಗಳ ಅಭ್ಯಾಸದಿಂದ ನಿರ್ವಿಕಲ್ಪ ಸಮಾಧಿಯ ಅತ್ಯುನ್ನತ ಅವಸ್ಥೆಯನ್ನು ಪಡೆದಿದ್ದನು. ಶ್ರೀರಾಮಕೃಷ್ಣರನ್ನು ಕಂಡು ಇವರು ವೇದಾಂತ ಸಾಧನೆಗೆ ಅತ್ಯುತ್ತಮ ಅಧಿಕಾರಿಯೆಂದು ಒಮ್ಮೆಗೇ ಅರಿತನು.

ಜಗನ್ಮಾತೆಯ ಆದೇಶವನ್ನು ಪಡೆದು ಶ್ರೀರಾಮಕೃಷ್ಣರು ತೋತಾಪುರಿಯ ಮಾರ್ಗದರ್ಶನದಲ್ಲಿ ವೇದಾಂತ ಸಾಧನೆಯಲ್ಲಿ ತೊಡಗಿದರು. ಸುಮಾರು ಮೂರು ದಿನಗಳು ಮೃತರಾದಂತೆ, ನಿಶ್ಚಲ ಧ್ಯಾನಾವಸ್ಥೆಯಲ್ಲಿ ಕುಳಿತಿದ್ದ ತನ್ನ ಶಿಷ್ಯನನ್ನು ಕಂಡು, ತೋತಾಪುರಿಯು ಮೂಕವಿಸ್ಮಿತನಾದನು. ಯಾವುದನ್ನು ತಾನು ನಲವತ್ತು ವರ್ಷಗಳ ಕಠಿಣ ತಪಸ್ಸಿನಿಂದ ಸಿದ್ಧಿಸಿಕೊಂಡಿದ್ದನೋ, ತನ್ನ ಶಿಷ್ಯ ಕೇವಲ ಒಂದೇ ದಿನದಲ್ಲಿ ಅದನ್ನು ಗಳಿಸಿ ದ್ದನ್ನು ಕಂಡು ಅವನಿಗೆ ಬಹಳ ಆಶ್ಚರ್ಯವಾಯಿತು.

ತೋತಾಪುರಿಗೆ ಭಕ್ತಿಮಾರ್ಗದ ಬಗ್ಗೆ ತಿರಸ್ಕಾರವಿತ್ತು. ಭಕ್ತಿಯ ಚರಮಾವಸ್ಥೆಯಲ್ಲಿ ಭಕ್ತನು ಅದ್ವೈತ ಜ್ಞಾನವನ್ನೇ ಪಡೆಯುತ್ತಾನೆ ಎಂಬುದರಲ್ಲಿ ಅವನಿಗೆ ನಂಬಿಕೆಯಿರಲಿಲ್ಲ. ಶ್ರೀರಾಮಕೃಷ್ಣರು ಕೈತಟ್ಟುತ್ತಾ ಭಗವನ್ನಾಮವನ್ನು ಪಠಿಸು ತ್ತಿದ್ದುದನ್ನು ಕಂಡು ತೋತಾಪುರಿಯು, "ಇದೇನು, ರೊಟ್ಟಿ ತಟ್ಟುತ್ತಿರುವೆ?" ಎಂದು ಹಂಗಿಸುತ್ತಿದ್ದನು. ಶ್ರೀರಾಮಕೃಷ್ಣರ ಸಂಸರ್ಗದಲ್ಲಿರುವಾಗಲೇ ಅವನು ಜಗನ್ಮಾತೆಯ ಸಾನ್ನಿಧ್ಯದ ಅನುಭವವನ್ನು ಪಡೆದು, ಭಕ್ತಿಪೂರ್ಣ ಹೃದಯದಿಂದ ಜಗನ್ಮಾತೆಯನ್ನು ಚಿಂತಿ ಸುತ್ತಾ, "ತಾಯಿ, ತಾಯಿ" ಎಂದು ಉದ್ಗರಿಸುತ್ತಿದ್ದನು. ಅವನು ಜಗನ್ಮಾತೆಯನ್ನು ಸ್ವೀಕರಿಸಿದ್ದನ್ನು ಕಂಡು, ಶ್ರೀರಾಮಕೃಷ್ಣರಿಗೆ ಅಪಾರ ಸಂತಸವಾಯಿತು. ಹೀಗೆ ಶ್ರೀರಾಮಕೃಷ್ಣರ ಗುರುಭಾವದ ಪ್ರಭಾವದಿಂದ ಭೈರವೀ ಬ್ರಾಹ್ಮಣಿ ಮತ್ತು ತೋತಾಪುರಿ ತಮ್ಮ ತಮ್ಮ ಗುರಿಗಳನ್ನು ಮುಟ್ಟಿ ಧನ್ಯತೆಯನ್ನು ಪಡೆದರು.

ಚಂದ್ರ ಮತ್ತು ಗಿರಿಜ ಎಂಬುವವರು ಕೂಡ ಭೈರವೀ ಬ್ರಾಹ್ಮಣಿಯ ಶಿಷ್ಯರು. ಅವರು ಶ್ರೀರಾಮಕೃಷ್ಣರಲ್ಲಿಗೆ ಬಂದರು. ಬ್ರಾಹ್ಮಣಿಯ ಉಪದೇಶದಿಂದ ಸಾಧನೆಯಲ್ಲಿ ತುಂಬ ಮುಂದುವರಿದಿದ್ದರೂ, ಸಾಕ್ಷಾತ್ಕಾರದ ಅಮೃತ ಫಲವನ್ನು ಅವರಿಬ್ಬರೂ ಪಡೆದಿರಲಿಲ್ಲ. ಅನೇಕ ಸಿದ್ಧಿಗಳನ್ನು ಪಡೆದು ಅವುಗಳ ಪ್ರಭಾವಕ್ಕೆ ಒಳಗಾಗಿ ಗುರಿತಪ್ಪಿದ್ದರು.

ಚಂದ್ರನು 'ಘಟಿಕಾ ಸಿದ್ಧಿ'ಯನ್ನು ಪಡೆದಿದ್ದನು. ಇದರ ಪ್ರಭಾವದಿಂದ, ಕಣ್ಣಿಗೆ ಅದೃಶ್ಯನಾಗಿ ಹೋಗಲಾಗದ ಮತ್ತು ಹೋಗಬಾರದ ಸ್ಥಳಗಳಿಗೆ ಹೋಗಿ ಬರುತ್ತಿದ್ದನು. ಕ್ರಮೇಣ ಕಾಮಕಾಂಚನಾಸಕ್ತನಾಗಿ, ಅಹಂಕಾರವೃದ್ಧಿಯಾಗಿ ತನ್ನ ಪವಾಡಶಕ್ತಿಯನ್ನು ಕಳೆದುಕೊಂಡನು.

ಗಿರಜನಿಗೂ ಅದ್ಭುತ ಶಕ್ತಿಗಳು ವಶವಾಗಿದ್ದವು. ಒಮ್ಮೆ ಶ್ರೀರಾಮಕೃಷ್ಣರು ಅವನೊಡನೆ ಶಂಭು ಮಲ್ಲಿಕನ ತೋಟದಿಂದ ಹಿಂದಿರುಗುವಾಗ ರಾತ್ರಿಯಾಗಿತ್ತು. ಆ ಘೋರ ಕತ್ತಲೆಯಲ್ಲಿ ತಮ್ಮ ಕಾಲನ್ನು ಮುಂದಿಡುವುದು ಕೂಡ ಅಸಾಧ್ಯವಾಯಿತು. ತಕ್ಷಣ ಗಿರಿಜನು ತನ್ನ ಬೆನ್ನಿನಿಂದ ಬೆಳಕನ್ನು ಹೊರಡಿಸುತ್ತಾ ನಿಂತನು. ಅದರ ಸಹಾಯದಿಂದ ಶ್ರೀರಾಮಕೃಷ್ಣರು ತಮ್ಮ ಕೊಠಡಿಗೆ ಹಿಂದಿರುಗಿದರು. ಈ ಪವಾಡಶಕ್ತಿಯು ಶ್ರೀರಾಮಕೃಷ್ಣರ ದಿವ್ಯ ಸಂಪರ್ಕದಲ್ಲಿ ಇರುವಾಗಲೇ ಅವನಿಂದ ಹೊರಟು ಹೋಯಿತು.

ಹೀಗೆ ಶ್ರೀರಾಮಕೃಷ್ಣರು ತಮ್ಮ ಗುರುಭಾವದ ಮೂಲಕ ಚಂದ್ರ ಮತ್ತು ಗಿರಜರ ಅಹಂಕಾರದ ಮೂಲವಾಗಿದ್ದ ಪವಾಡಶಕ್ತಿಗಳನ್ನು ನಾಶಗೊಳಿಸಿ, ಅವರು ನೈಜ ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸುವಂತೆ ಹಾದಿಯನ್ನು ಸುಗಮಗೊಳಿಸಿದರು.

ತಾಂತ್ರಿಕ ಸಾಧಕನಾದ ಗೌರೀಪಂಡಿತನು ಯಾವುದಾದರೂ ಶಾಸ್ತ್ರವಿಚಾರದ ಚರ್ಚೆ ನಡೆಯುವ ಸ್ಥಳಕ್ಕೆ ಪ್ರವೇಶಿಸುವ ಮುನ್ನ , ಮೇಘಗಂಭೀರ ಧ್ವನಿಯಲ್ಲಿ **ಹಾ ರೇ ರೇ, ನಿರಾಲಂಬೋ ಲಂಬೋದರ ಜನನೀ ಕಂ ಯಾಮಿ ಶರಣಂ** ಎಂದು ಕೆಲವು ಬಾರಿ ಬಹಳ ಗಟ್ಟಿಯಾಗಿ ಉಚ್ಚರಿಸುತ್ತಿದ್ದ. ಈ ಶಬ್ದವು ಅವನೊಳಗೆ ವಿಶೇಷ ಶಕ್ತಿಯನ್ನು ಜಾಗೃತಗೊಳಿಸುತ್ತಿತ್ತು ಮತ್ತು ಎದುರಾಳಿಯನ್ನು ಗಾಬರಿಗೊಳಿಸಿ, ಅವರ ಬಲವನ್ನು ಕುಂಠಿತಗೊಳಿಸುತ್ತಿತ್ತು. ಶ್ರೀರಾಮಕೃಷ್ಣರು ಅವನ ಈ ಶಕ್ತಿಯನ್ನು ತಮ್ಮಲ್ಲಿ ಸೆಳೆದುಕೊಂಡು, ಅವನಿಗೆ ನೈಜ ಆಧ್ಯಾತ್ಮಿಕತೆಯನ್ನು ತೋರಿದರು. ಅವನು ತೀವ್ರ ವೈರಾಗ್ಯ ಹೊಂದಿದವನಾಗಿ ತನ್ನ ಪಾಂಡಿತ್ಯ, ಕೀರ್ತಿ, ಸಿದ್ಧಿ, ಪತ್ನಿ, ಪುತ್ರರಿಂದ ಬಿಡಿಸಿಕೊಂಡು ತಪಸ್ಸನ್ನಾಚರಿಸಲು ತೆರಳಿದನು.

ಇದೇ ರೀತಿಯಲ್ಲಿ ಪಂಡಿತ ಪದ್ಮಲೋಚನನ ಸಿದ್ಧಿಯನ್ನೂ ಶ್ರೀರಾಮಕೃಷ್ಣರು ನಾಶಮಾಡಿದರು; ತಮ್ಮ ಗುರುಭಾವದಿಂದ ಅವನಿಗೆ ಕೃಪೆಗೈದರು. ಕಾಲ್ನಾದ ಭಗವಾನ್‌ದಾಸ ಬಾಬಾಜಿಯ ಅಹಂಕಾರವನ್ನೂ ತಮ್ಮ ಗುರುಭಾವದ ಮೂಲಕ ಶ್ರೀರಾಮಕೃಷ್ಣರು ಮುರಿದು, ಅವನ ಅಂತರ್ದೃಷ್ಟಿಯನ್ನು ತೆರೆದರು.

ಗುರುಭಾವವು ಗಳಿತವಾಗಿ ಶ್ರೀರಾಮಕೃಷ್ಣರು ದಿವ್ಯ ಭಾವದಲ್ಲಿ ನೆಲೆಸುವಂತಾಯಿತು. ಹೂವು ಅರಳಿದಾಗ ದುಂಬಿಗಳು ತಾವಾಗಿಯೇ ಬರುವಂತೆ ಆಧ್ಯಾತ್ಮಿಕ ಪಿಪಾಸುಗಳು ಶ್ರೀರಾಮಕೃಷ್ಣರೆಡೆಗೆ ಬರಲು ಆರಂಭಿಸಿದರು. ಅವರೆಲ್ಲರ ಮನೋಭಾವಕ್ಕೆ ಅನುಗುಣವಾಗಿ ಶ್ರೀರಾಮಕೃಷ್ಣರು ಅವರಿಗೆ ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡಿದರು. ಕೇಶವಚಂದ್ರಸೇನನೇ ಮೊದಲಾದ ಗೃಹೀಭಕ್ತರನ್ನೂ ಅವರು ಉದ್ಧರಿಸಿದರು.

ವಿಜ್ಞಾನದ ಅನ್ವೇಷಣೆಗಳಿಂದಲೂ, ಪಾಶ್ಚಾತ್ಯರ ಇಂದ್ರಿಯಭೋಗದ ವಿಲಾಸಗಳಿಂದಲೂ ಪ್ರಭಾವಿತರಾಗಿದ್ದ ವಿದ್ಯಾವಂತರಲ್ಲಿ ಧಾರ್ಮಿಕ ಶ್ರದ್ಧೆಯನ್ನು ಶ್ರೀರಾಮಕೃಷ್ಣರು ಮೂಡಿಸಿದರು, ಆಧುನಿಕ ಯುವ ಜನಾಂಗದ ಪ್ರತಿನಿಧಿಯೋ ಎಂಬಂತಿದ್ದ ನರೇಂದ್ರನನ್ನು ವಿಶ್ವಸಂನ್ಯಾಸಿ ವಿವೇಕಾನಂದರಾಗಿ ತಯಾರಿಸಲು ತಮ್ಮ ಅಪಾರ ಪ್ರೇಮ ಮತ್ತು ಅಗಣಿತ ಆಧ್ಯಾತ್ಮಿಕ ಶಕ್ತಿಗಳನ್ನು ಅವನಿಗೆ ಧಾರೆಯೆರೆದರು. ನರೇಂದ್ರನ ನೇತೃತ್ವದಲ್ಲಿ ತಮ್ಮ ಶಿಷ್ಯರ ತಂಡವೊಂದನ್ನು ನಿರ್ಮಿಸಿ, ಭಾರತದಾದ್ಯಂತ ಆಧ್ಯಾತ್ಮಿಕತೆಯ ನದಿ ಪ್ರವಹಿಸುವಂತೆ ಮಾಡಿದರು. ಇದರಿಂದ ಸನಾತನ ಧರ್ಮದ ಪುನರುತ್ಥಾನವನ್ನು ಸಾಧಿಸಲು ಸಾಧ್ಯವಾಯಿತು.


ತಮ್ಮ ಪತ್ನಿಯಾದ ಶ್ರೀಶಾರದಾದೇವಿಯವರೊಂದಿಗೇ ಗುರುಸ್ಥಾನದಿಂದ ನಡೆದುಕೊಂಡ ಶ್ರೀರಾಮಕೃಷ್ಣರು ಜಗತ್ತಿನ ಮುಂದೆ, ಪವಿತ್ರತೆಯ ಪರಾಕಾಷ್ಠೆಯನ್ನು ಮೆರೆದರು. ಶ್ರೀಶಾರದಾದೇವಿಯವರನ್ನು ಮಾತೃಭಾವದ ಪರಮಮೂರ್ತಿಯನ್ನಾಗಿಸಿ, ಸಂಘಜನನಿಯನ್ನಾಗಿ ರೂಪಿಸಿದರು. ಇಂದಿಗೂ ಶ್ರೀರಾಮಕೃಷ್ಣ ಮಹಾಸಂಘದ ಮೂಲಕ ಶ್ರೀರಾಮಕೃಷ್ಣರ ಗುರುಶಕ್ತಿಯು ಅಸಂಖ್ಯಾತ ಭಕ್ತರನ್ನು ಈ ಭವಸಾಗರದಿಂದ ಪಾರುಗಾಣಿಸುತ್ತಿದೆ.

ಇಂತಹ ಭಗವಾನ್ ಶ್ರೀರಾಮಕೃಷ್ಣರಿಗೆ, **'ಗುರು ಮಹಾರಾಜ್'** ಎಂಬ ಸಂಬೋಧನೆ ಅತ್ಯಂತ ಸಮಂಜಸವಾಗಿದೆ, ಅಲ್ಲವೇ?

•

# ಶ್ರೀರಾಮಕೃಷ್ಣರ 'ದಿವ್ಯಭಾವ'

ಬ್ರಹ್ಮಚಾರಿ ಶಾಂತಿಚೈತನ್ಯ



## ದಿವ್ಯಭಾವದ ಹಿನ್ನೆಲೆ

ಶ್ರೀರಾಮಕೃಷ್ಣ ಲೀಲಾಪ್ರಸಂಗದ ಲೇಖಕರಾದ ಪೂಜ್ಯ ಸ್ವಾಮಿ ಶಾರದಾನಂದರು ತಮ್ಮ ಗ್ರಂಥದ ಮುನ್ನುಡಿಯಲ್ಲಿ ಶ್ರೀರಾಮಕೃಷ್ಣರ ಜೀವನ ಹಾಗೂ ಅವತಾರ ಕಾರ್ಯಗಳನ್ನು ಶಾಸ್ತ್ರಗಳ ಹಿನ್ನೆಲೆಯಲ್ಲಿ ಚರ್ಚಿಸುವ ತಮ್ಮ ಉದ್ದೇಶವನ್ನು ಪ್ರಸ್ತಾಪಿಸುತ್ತಾರೆ. ಈ ಗ್ರಂಥದ ಮೇಲೆ ಉಳಿದೆಲ್ಲ ಶಾಸ್ತ್ರಗಳಿಗಿಂತ ಹೆಚ್ಚಾಗಿ ತಂತ್ರ ಶಾಸ್ತ್ರದ ಪ್ರಭಾವವನ್ನು ನಾವು ಗುರುತಿಸಬಹುದು. ತಂತ್ರಶಾಸ್ತ್ರವು ಸಾಧನಾಪ್ರಧಾನ ವಾದ ಶಾಸ್ತ್ರ. ತತ್ತ್ವವಿಚಾರಕ್ಕಿಂತ ಹೆಚ್ಚಾಗಿ ಸಾಧಕರಿಗೆ ಉಪಯುಕ್ತವಾಗುವ ಹತ್ತು ಹಲವಾರು ಸಾಧನಾಪ್ರಣಾಲಿಗಳನ್ನು ತಂತ್ರಶಾಸ್ತ್ರವು ತಿಳಿಯಹೇಳುತ್ತದೆ. **ಪಶುಭಾವ, ವೀರಭಾವ** ಮತ್ತು **ದಿವ್ಯಭಾವ** ಎಂದು ಮೂರು ವಿಧವಾಗಿ ಸಾಧಕರನ್ನು ಅವರ ಪ್ರಕೃತಿಗೆ ಅನುಗುಣವಾಗಿ ವಿಂಗಡಿಸಿ, ಪ್ರತಿಯೊಂದು ವರ್ಗಕ್ಕೂ ವಿಶೇಷವಾದ ಸಾಧನೆ, ನಿಯಮಗಳನ್ನು ಅದು ವಿಧಿಸುತ್ತದೆ. ಇವುಗಳಲ್ಲಿ ದಿವ್ಯಭಾವವೇ ಅತ್ಯಂತ ಶ್ರೇಷ್ಠವಾದುದು.

ಶ್ರೀರಾಮಕೃಷ್ಣರ ತಂತ್ರಸಾಧನೆಯಲ್ಲಿ ಅವರ ಗುರುವಾಗಿದ್ದ ಭೈರವೀ ಬ್ರಾಹ್ಮಣಿಯು ಹೇಗೆ ಅವರಿಂದ ತಂತ್ರಶಾಸ್ತ್ರಗಳಲ್ಲಿ ಹೇಳಿರುವ ಅರುವತ್ತನಾಲ್ಕು ಮುಖ್ಯ ಸಾಧನೆಗಳನ್ನು ಮಾಡಿಸಿದಳು ಎಂಬುದರ ವಿವರಗಳನ್ನು ಲೀಲಾಪ್ರಸಂಗದಲ್ಲಿ ನಾವು ನೋಡಬಹುದು. ದುಸ್ತರವಾದ ಈ ಎಲ್ಲ ಸಾಧನೆಗಳಲ್ಲಿ ಶ್ರೀರಾಮಕೃಷ್ಣರು ಅನಾಯಾಸವಾಗಿ ನಂಬಲಸಾಧ್ಯವಾದಷ್ಟು ಕಡಿಮೆ ಸಮಯದಲ್ಲಿ ಸಿದ್ಧಿಯನ್ನು ಪಡೆದು, ದಿವ್ಯಭಾವವನ್ನು ಹೊಂದಿದರು. ಸಾಮಾನ್ಯರಿಗೆ ಅಸಹ್ಯ, ಅಶ್ಲೀಲ ಎನಿಸುವ ಹಲವು ತಂತ್ರಸಾಧನೆಗಳ ಹಿಂದೆ ಇರುವ ಮುಖ್ಯ ಉದ್ದೇಶವೇನೆಂದರೆ ಸಾಧಕನ ಅಂತರಂಗದಲ್ಲಿ ಮನೆ ಮಾಡಿರುವ ಮಡಿವಂತಿಕೆ, ಕಾಮದ ಭಾವನೆಗಳನ್ನು ನಿರ್ಮೂಲನೆ ಮಾಡಿ, ಎಲ್ಲ ಚರಾಚರ ವಸ್ತುಗಳಲ್ಲಿ ಜಗನ್ಮಾತೆಯ ಸಾನ್ನಿಧ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು. ಈ ಉದ್ದೇಶದಲ್ಲಿ ಶ್ರೀರಾಮಕೃಷ್ಣರು ಸಂಪೂರ್ಣ ವಾಗಿ ಸಫಲರಾದರು. ಕಷ್ಟತರವಾದ ಅನೇಕ ತಾಂತ್ರಿಕ ಸಾಧನೆಗಳನ್ನು ಮಾಡುವ ಹಂತದಲ್ಲಿ ಶ್ರೀರಾಮಕೃಷ್ಣರ ಮನಸ್ಸು ಸಮಾಧಿಗೆ ಏರುತ್ತಿತ್ತು. ಅಂಥ ಒಂದು ಸಾಧನೆಯ ಸಮಯದಲ್ಲಿ, ಸಮಾಧಿಯಿಂದ ಮನಸ್ಸು ಬಹಿರ್ಮುಖವಾದಾಗ ಬ್ರಾಹ್ಮಣಿ ಅವರಿಗೆ ಹೀಗೆ ಹೇಳಿದಳು: 'ನೀನು ಅತ್ಯಂತ ಕಷ್ಟಸಾಧ್ಯವಾದ ತಂತ್ರ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದು ದಿವ್ಯಭಾವದಲ್ಲಿ ಪ್ರತಿಷ್ಠಿತನಾಗಿದ್ದೀಯೆ. ವೀರಭಾವದಲ್ಲಿ ಇದೇ ಅಂತಿಮ ಸಾಧನೆ.'" (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಭಾಗ–೧, ಪುಟ ೨೦೯)

ಶ್ರೀರಾಮಕೃಷ್ಣರ ತಂತ್ರಸಾಧನೆಯ ಸಮಾಪ್ತಿಯನ್ನು ಸೂಚಿಸುವ ಮೇಲಿನ ಘಟನೆ ನಡೆದದ್ದು ೧೮೬೩ ರಲ್ಲಿ. ಭೈರವೀ ಬ್ರಾಹ್ಮಣಿಯು ನುಡಿದಂತೆ ಇಲ್ಲಿಂದ ಮುಂದೆ ಶ್ರೀರಾಮಕೃಷ್ಣರು ಅನವರತವೂ ದಿವ್ಯಭಾವದಲ್ಲಿ ನೆಲೆನಿಂತಿದ್ದರು; ಅದೇ ಅವರಿಗೆ ಸಹಜಾವಸ್ಥೆಯಾಗಿತ್ತು.

ಸಾಧಕಭಾವ ಮತ್ತು ಗುರುಭಾವಗಳ ಅನಂತರ, ಶ್ರೀರಾಮಕೃಷ್ಣರ ಜೀವನದಲ್ಲಿ 'ದಿವ್ಯಭಾವ' ಕಾಣಬರುತ್ತದೆ. ಇದನ್ನು ಶ್ರೀರಾಮಕೃಷ್ಣ ಲೀಲಾ ಪ್ರಸಂಗದಲ್ಲಿ ಸ್ವಾಮಿ ಶಾರದಾನಂದರು ಶಾಸ್ತ್ರೀಯವಾಗಿ ಹಾಗೂ ಸೋದಾಹರಣವಾಗಿ ವಿವರಿಸಿದ್ದಾರೆ. ನಿರ್ದುಷ್ಟವೂ ವಿದ್ವತ್ಪೂರ್ಣವೂ ಆದ ಶೈಲಿಯಲ್ಲಿ ಅದರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ರಾಮಕೃಷ್ಣ ಮಹಾಸಂಘದ ಮುಖ್ಯಕೇಂದ್ರ ಬೇಲೂರು ಮಠದಲ್ಲಿ ಇರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಶಿಕ್ಷಾರ್ಥಿಯಾಗಿದ್ದಾರೆ.

### ಶ್ರೀರಾಮಕೃಷ್ಣರ ದಿವ್ಯಭಾವ

ಸ್ವಾಮಿ ಶಾರದಾನಂದರು ತಂತ್ರಶಾಸ್ತ್ರಗಳ ಆಧಾರದ ಮೇಲೆ 'ದಿವ್ಯಭಾವ'ಕ್ಕೆ ಮತ್ತೊಂದು ವಿವರಣೆಯನ್ನು ತಮ್ಮ ಕೃತಿಯಲ್ಲಿ ನೀಡುತ್ತಾರೆ. **'ಶ್ರೀರಾಮಕೃಷ್ಣ ಲೀಲಾಪ್ರಸಂಗ'** ಗ್ರಂಥವು ಈಗ ಪ್ರಕಟವಾಗಿರುವಂತೆ ಐದು ಭಾಗಗಳನ್ನು ಒಳಗೊಂಡಿದೆ. ಇದರಲ್ಲಿ ಮೂರನೆಯ ಮತ್ತು ನಾಲ್ಕನೆಯ ಭಾಗಗಳನ್ನು ಲೇಖಕರು ಗುರುಭಾವ (ಪೂರ್ವಾರ್ಧ) ಮತ್ತು ಗುರುಭಾವ (ಉತ್ತರಾರ್ಧ) ಎಂದು ಕ್ರಮವಾಗಿ ಹೆಸರಿಸಿದ್ದಾರೆ. ಓದುಗರು ಮುಖ್ಯವಾಗಿ ನೆನಪಿನಲ್ಲಿಡಬೇಕಾದ ಅಂಶವೆಂದರೆ ಲೇಖಕರು ಮೊದಲು ಈ ಎರಡು ಭಾಗಗಳನ್ನು ರಚಿಸಿದರು (ನಂತರ ಭಾಗ ೨, ೧ ಮತ್ತು ೫ ರ ರಚನೆಯಾಯಿತು). ಈ ಎರಡು ಭಾಗಗಳಲ್ಲಿ ಪ್ರಾಯಶಃ ಶ್ರೀರಾಮಕೃಷ್ಣರು ತಮ್ಮ ಸಾಧನೆಗಳನ್ನೆಲ್ಲ ಮುಗಿಸಿದ ಕಾಲದಿಂದ, ಅವರ ಹೆಸರು ಕೊಲ್ಕತಾದಲ್ಲಿ ಜನಪ್ರಿಯವಾಗುವವರೆಗಿನ ಕಾಲದವರೆಗೆ, ಅವರ ಜೀವನದ ಘಟನೆಗಳನ್ನು ವ್ಯಾಖ್ಯಾನ ಮಾಡಲಾಗಿದೆ. ಗುರುಭಾವದ (ಉತ್ತರಾರ್ಧ) ಮುಂದಿನ ಹಾಗೂ ಗ್ರಂಥದ ಕಡೆಯ ಭಾಗವನ್ನು ಲೇಖಕರು 'ದಿವ್ಯಭಾವ' ಎಂದು ಕರೆಯುತ್ತಾರೆ. ಸ್ವಾಮಿ ಶಾರದಾನಂದರೇ ತಿಳಿಸಿರುವಂತೆ ಗುರುಭಾವದ ಅತ್ಯುನ್ನತ ಸ್ಥಿತಿಯನ್ನೇ ತಂತ್ರವು 'ದಿವ್ಯಭಾವ' ಎಂದು ಕರೆಯುತ್ತದೆ. ಈ ಸ್ಥಿತಿಯಲ್ಲಿ ಗುರುಭಾವವು ವ್ಯಕ್ತಿಗೆ ಸ್ವಾಭಾವಿಕವಾಗಿಬಿಟ್ಟಿರುತ್ತದೆ. ಅಲ್ಲದೆ ನಿಸ್ವಾರ್ಥಪ್ರೇಮದಿಂದ ಹೊಮ್ಮುವ ಆ ವ್ಯಕ್ತಿಯ ನಡೆನುಡಿಗಳೆಲ್ಲವೂ ಸಾಮಾನ್ಯ ಜನರ ಬುದ್ಧಿಗೆ ನಿಲುಕದ ಉನ್ನತಸ್ತರಕ್ಕೆ ಸೇರಿರುತ್ತವೆ.

ಇಂತಹ ದಿವ್ಯಭಾವ ಮಾನವನಲ್ಲಿ ವ್ಯಕ್ತವಾಗುವುದು ಎಷ್ಟು ಅಪರೂಪ ಎಂದು ಸ್ವಾಮಿ ಶಾರದಾನಂದರು ತಮ್ಮ ದಿವ್ಯಭಾವ ಗ್ರಂಥಭಾಗದ ಆರಂಭದಲ್ಲಿ ತಿಳಿಸುತ್ತಾರೆ, "....ಮಾನವನಲ್ಲಿ ಶಮದಮಾದಿ ಗುಣಗಳು ಉಸಿರಾಟದಂತೆ ಸ್ವಾಭಾವಿಕವಾದಾಗ, ಭಗವತ್ಪ್ರೇಮದಲ್ಲಿ ಮತ್ತನಾದಾಗ, ಕ್ಷುದ್ರ ಅಹಂಕಾರವು ಅಖಂಡ ಸಚ್ಚಿದಾನಂದ ಸಾಗರದಲ್ಲಿ ವಿಲೀನವಾದಾಗ, ನಿರ್ವಿಕಲ್ಪ ಸಮಾಧಿಯಿಂದ ಮನಸ್ಸಿನ ಎಲ್ಲಾ ಮಲಿನತೆಗಳೂ ಭಸ್ಮೀಭೂತವಾದಾಗ, ಆಂತರಿಕ ಅನಾದಿ ವಾಸನೆಗಳೆಲ್ಲ ಜ್ಞಾನಸೂರ್ಯನ ಪ್ರಖರತಾಪದಿಂದ ದಗ್ಧವಾಗಿ, ಶುದ್ಧ ಸಾತ್ತ್ವಿಕ ಮೂರ್ತಿಯಾಗಿ ಅವನು ಪರಿಣಮಿಸಿದಾಗ, ಅವನಲ್ಲಿ ದಿವ್ಯಭಾವವು ಉದಯವಾಗಿ ಕೃತಾರ್ಥನಾಗುವನು" (ಭಾಗ ೨, ಪುಟ ೨೧೬). ಇಷ್ಟು ದುರ್ಲಭವಾದ ದಿವ್ಯಭಾವವು ಶ್ರೀರಾಮಕೃಷ್ಣರಲ್ಲಿ ಅವರ ಜೀವಿತದ ಕಡೆಯ ಹನ್ನೆರಡು ವರ್ಷಗಳಲ್ಲಿ ಸಂಪೂರ್ಣವಾಗಿ ಪ್ರಕಟಗೊಂಡಿತು ಎಂಬುದು ಸ್ವಾಮಿ ಶಾರದಾನಂದರ ಅಭಿಪ್ರಾಯ. ೧೮೭೫ ಕ್ಕಿಂತ ಮುಂಚೆ ಶ್ರೀರಾಮಕೃಷ್ಣರು ಸಾರ್ವಜನಿಕ ಜೀವನದಿಂದ ಸಾಕಷ್ಟು ದೂರವಾಗಿಯೇ ಇದ್ದರು. ಅವರ ಪ್ರಭಾವ ದಕ್ಷಿಣೇಶ್ವರದ ಕಾಳೀಮಂದಿರಕ್ಕಷ್ಟೇ ಸೀಮಿತವಾಗಿತ್ತು. ಆದರೆ ಯಾವಾಗ ಅವರು ಬ್ರಹ್ಮಸಮಾಜದ ವಿಖ್ಯಾತ ನಾಯಕ ಕೇಶವಚಂದ್ರಸೇನನನ್ನು ೧೮೭೫ ರಲ್ಲಿ ಭೇಟಿಮಾಡಿದರೋ ಅಂದಿನಿಂದ ಅವರ ದಿವ್ಯನಾಮ ಕೊಲ್ಕತಾದಲ್ಲಿ ಹೆಚ್ಚು ಪ್ರಚಾರವಾಗತೊಡಗಿತು. ಈ ಕುರಿತು ಸ್ವಾಮಿ ಶಾರದಾನಂದರು ಹೀಗೆ ಹೇಳುತ್ತಾರೆ: " ...೧೮೭೫ ರಿಂದ (ಶ್ರೀರಾಮಕೃಷ್ಣರ) ದಿವ್ಯಭಾವವು ಪ್ರಕಾಶಗೊಂಡು, ಅವರು ಧರ್ಮಸಂಸ್ಥಾಪನಾ ಕಾರ್ಯದಲ್ಲಿ ಮನಸ್ಸನ್ನಿರಿಸಿದ್ದರು ಎಂದು ಹೇಳುವುದಕ್ಕೆ ಕಾರಣ, ಆ ಅವಧಿಯಿಂದ ಅವರು ನಿರಂತರ ದಿವ್ಯಭಾವ ಪ್ರೇರಣೆಗೆ ಒಳಪಟ್ಟು, ಭಾರತದಲ್ಲಿ ಸನಾತನ ಧರ್ಮವನ್ನು ಪುನಃ ಪ್ರತಿಷ್ಠಾಪಿಸಲು ಸತತವಾಗಿ ಹೋರಾಡಿದರು. ಭಾರತದ ಸನಾತನ ಧರ್ಮವು ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ನಶಿಸಿ ಹೋಗುವುದರಲ್ಲಿತ್ತು. ಪಾಶ್ಚಾತ್ಯ ಶಿಕ್ಷಣವನ್ನು ಪಡೆದ ಭಾರತೀಯರಿಗೆ ಅವರು ಸನಾತನ ಧರ್ಮವನ್ನು ಪರಿಚಯಿಸಲು ಪ್ರಯತ್ನಿಸಿದರು" (ಭಾಗ ೨, ಪುಟ ೨೧೫). ಇಂಥ ದಿವ್ಯಭಾವದ ಪೂರ್ಣಪ್ರಕಾಶವನ್ನು ಅವತಾರಪುರುಷರಲ್ಲಿ ಮಾತ್ರವೇ ಕಾಣಬಹುದು ಎಂದು ಸ್ವಾಮಿ ಶಾರದಾನಂದರು ಹೇಳುತ್ತಾರೆ. ಅವರ ಪ್ರಕಾರ, ಈ ಕಾರಣದಿಂದಾಗಿಯೇ ಅವತಾರಪುರುಷರ ಚರಿತ್ರೆಯು ನಮಗೆ ಎಂದೆಂದಿಗೂ ರಹಸ್ಯಮಯವಾಗಿಯೇ ಉಳಿಯುತ್ತದೆ.

### ದಿವ್ಯಭಾವದ ಪ್ರಕಟಣೆ

ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರಲ್ಲಿ ದಿವ್ಯಭಾವವು ಹೇಗೆ ಪೂರ್ಣವಾಗಿ ಅಭಿವ್ಯಕ್ತಿಯನ್ನು ಪಡೆಯಿತು ಎಂಬುದಕ್ಕೆ ಹಲವು ನಿದರ್ಶನಗಳನ್ನು ನೀಡುತ್ತಾರೆ. ಮೊದಲನೆಯದಾಗಿ ಶ್ರೀರಾಮಕೃಷ್ಣರು ತಾವು ಯಾರ ಮೇಲೆ ಅನುಗ್ರಹ ಮಾಡಲು ಇಚ್ಛಿಸುತ್ತಿದ್ದರೋ ಅಂತಹ ಸುದೈವೀ ಭಕ್ತರೊಡನೆ ಇಟ್ಟುಕೊಳ್ಳುತ್ತಿದ್ದುದು ಗುರು–ಶಿಷ್ಯ ಸಂಬಂಧವನ್ನು. ತಂತ್ರಶಾಸ್ತ್ರಗಳಲ್ಲಿ ಮಾಂತ್ರೀ (ಮಾನವೀ), ಶಾಕ್ತೀ ಹಾಗೂ ಶಾಂಭವೀ ಎಂಬ ಮೂರು ಬಗೆಯ ದೀಕ್ಷಾವಿಧಾನಗಳನ್ನು ಹೇಳಿದೆ. ಸಾಮಾನ್ಯ ಗುರುಗಳು ಕೇವಲ ಮಾಂತ್ರೀ ದೀಕ್ಷೆಯನ್ನು ನೀಡಬಲ್ಲರು. ಈ ದೀಕ್ಷಾಕ್ರಮದಲ್ಲಿ ಶುಭಕಾಲ, ಶೌಚ, ಬಾಹ್ಯ ಆಚರಣೆಗಳು ಮುಂತಾದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆದರೆ ಯಾರಲ್ಲಿ ಗುರುಭಾವವು ಸ್ವಲ್ಪಮಟ್ಟಿಗಾದರೂ ಜಾಗೃತವಾಗಿರುತ್ತದೆಯೋ, ಅಂಥವರು ಶಿಷ್ಯರಿಗೆ ಶಾಕ್ತೀ ದೀಕ್ಷೆಯನ್ನು